ಶ್ರೀ ವೇದಾಂತ ಹೆಬ್ಬಾರ್.—ಮಾನ್ಯ ಅಧ್ಯಕ್ಷರೇ ನಾನು ನನ್ನ ಪ್ರಶ್ನೆಯಲ್ಲಿ ಮುಚ್ಚಿರುವ ಕಾರ್ಖಾನೆಗಳು ಯಾವುವು ? ಅದರಲ್ಲಿ ಎಷ್ಟು ಕಾರ್ಖಾನೆಗಳು ಕೆಲಸ ಪುನರಾರಂಭ ಮಾಡಿವೆ ಎಂದು ಕೇಳಿದ್ದರೆ ಯಾವುದು ಇಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಆದರೆ ಈಗ ಇಲ್ಲಿ ಎರಡು ಕಾರ್ಖಾನೆಗಳು ಪುನರಾರಂಭಗೊಂಡಿವೆ ಎಂದು ಹೇಳಿದ್ದೀರಿ. ಈ ಸದನಕ್ಕೆ ಯಾವುದಾದರೊಂದು ಮಾಹಿತಿಯನ್ನು ಕೊಡಬೇಕಾದರೆ. ಜವಾಬ್ದಾರಿಯಿಂದ ಇಲಾಖೆಯವರು ಕೊಡಬೇಕು. ಏಕೆಂದರೆ ನಾವು ಸಹ ಜವಾಬ್ದಾರಿಯಿಂದ ಪ್ರಶ್ನೆ ಕೇಳಿರುತ್ತೇವೆ. ದಯವಿಟ್ಟು ನಾನು ಕಾರ್ಮಿಕ ಸಚಿವರನ್ನು ಕೇಳುತ್ತೇನೆ. ತಾವು ಕಾರ್ಮಿಕ ಇಲಾಖೆಗೆ ಚಾಟಿ ಏಟು ಕೊಟ್ಟು ಸರಿಯಾದ ಉತ್ತರ ಕೊಡಬೇಕು, ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ತಿಳುವಳಿಕೆ ಕೊಡುತ್ತೀರಾ ?

ಶ್ರೀ ಜಿ. ಎಸ್. ಬಾಗಲಕೋಟಿ.—ಸನ್ಮಾನ್ಯ ಹಿರಿಯ ಸದಸ್ಯರ ಸಲಹೆ ಸೂಚನೆಯನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇನೆ.

ರಾಜ್ಯದಲ್ಲಿರುವ ನಿರುದ್ಯೋಗಿಗಳು

೧೩೨ ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—(ಗುಂಡ್ಲುಪೇಟೆ) ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರುಗಳನ್ನು ನೊಂದಾಯಿಸಿರುವ ಮಹಿಳಾ ಮತ್ತು ಪುರುಷ ನಿರುದ್ಯೋಗಿಗಳ ಒಟ್ಟು ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು) ಹಾಗೂ ಕಳೆದ ಮೂರು ವರ್ಷಗಳಿಂದ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ ?

ಆ) ಸದರಿ ಉದ್ಯೋಗ ವಿನಿಮಯ ಕೇಂದ್ರಗಳಿಂದ ರಾಜ್ಯ ಸರ್ಕಾರದವರು ನೇಮಕಾತಿಗಾಗಿ ಪಡೆದಿರುವ ಪಟ್ಟಿಯನ್ನು ತರಿಸದೆ ಕೇವಲ ನೇಮಕಾತಿ ಸಮಿತಿ ಮಂಕ್ತು ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡುತ್ತಿರುವುದರಿಂದ ಈ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದು ಗೊಳಿಸುವುದು ಸೂಕ್ತವಲ್ಲವೆ ?

ಇ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಸರ್ಕಾರದವರು ನೀಡುವ ಕಾರಣಗಳೇನು ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ೧೯೮೭ನೇ ನವೆಂಬರ್ ಮಾಸಾಂತ್ಯದಲ್ಲಿ ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಒಟ್ಟು ೧೦,೧೭,೪೨೪ ಆಭ್ಯರ್ಥಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುತ್ತಾರೆ. ಇವರುಗಳಲ್ಲಿ ೧,೯೨,೬೭೯ ಮಹಿಳೆಯರು ಮತ್ತು ೮,೨೪,೭೬೫ ಪುರುಷರು. ಜಿಲ್ಲಾವಾರು ನೋಂದಾಯಿತ ಅಭ್ಯರ್ಥಿಗಳ ಸಂಖ್ಯೆ ಅನುಬಂಧ-ಅ ನಲ್ಲಿ ಮಂಡಿಸಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅಂದರೆ ೧೯೮೭ನೇ ನವೆಂಬರ್ ಅಂತ್ಯದವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ೪,೫೮೬ ಮಹಿಳೆಯರು ಮತ್ತು ೨೮೫೫೮ ಪುರುಷರು ಸೇರಿದಂತೆ ಒಟ್ಟು ೩೩,೧೧೪ ಉದ್ಯೋಗಾರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ. ವರ್ಷವಾರು ಉದ್ಯೋಗ ಪಡೆದವರ ವಿವರ ಅನುಬಂಧ-ಆ ನಲ್ಲಿ ಮಂಡಿಸಿದೆ.

ಆ) ರಾಜ್ಯ ಸರ್ಕಾರದಲ್ಲಿನ ಎಲ್ಲಾ ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ಹುದ್ದೆಗಳಿಗೆ ರಾಜ್ಯದ ಲೋಕ ಸೇವಾ ಆಯೋಗ ಮತ್ತು ಇತರೆ ನೇಮಕಾತಿ ಸಮಿತಿಗಳ ಮೂಲಕ ನೇಮಕಾತಿ ಮಾಡಲಾಗುತ್ತಿದೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿನ ಎಲ್ಲಾ ಇಲಾಖೆಗಳಲ್ಲಿನ ಗ್ರೂಪ್ 'ಡಿ' ಹುದ್ದೆಗಳು ಹಾಗೂ ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿಯು ಗರಿಷ್ಠ ವೇತನ ಶ್ರೇಣಿ ರೂ. ೧೫೫೦ ಒಳಪಡುವ ಹುದ್ದೆಗಳು ಉದ್ಯೋಗ ವಿನಿಮಯ ಕೇಂದ್ರಗಳ ವ್ಯಾಪ್ತಿಗೆ ಒಳಪಟ್ಟಿದೆ. ಅಲ್ಲದೆ ದಿನಾಂಕ ೩-೮-೮೭ರಂದು ಸರ್ಕಾರ ಹೊರಡಿಸಿರುವ ಆದೇಶದಲ್ಲಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಉದ್ದಿಮೆಗಳು ಹಾಗೂ ಖಾಸಗಿ ಉದ್ದಿಮೆಗಳ ಅಧಿಕಾರ ವ್ಯಾಪ್ತಿಯಲ್ಲಿ ಉದ್ಭವವಾಗುವಂತಹ ಮಾಸಿಕ ವೇತನ ರೂ. ೧೫೫೦ಗಳ (ಒಂದು ಸಾವಿರದ ಇನ್ನೂರೈವತ್ತು ಮಾತ್ರ) ಕೆಳಗೆ ಬರುವಂತಹ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, ೧೯೫೯ರ ಬೇರೆಗೆ

ಉದ್ಯೋಗ ವಿನಿಮಯ ಕೇಂದ್ರಗಳಿಗೆ ಅಧಿಸೂಚಿಸಂವುದೇ ಅಲ್ಲದೆ ಉದ್ಯೋಗ ವಿನಿಮಯ ಕೇಂದ್ರಗಳ ಮುಖಾಂತರ ಉದ್ಯೋಗಾರ್ಥಿಗಳ ಹೆಸರುಗಳನ್ನು ತರಿಸಿಕೊಂಡು ಆ ಪಟ್ಟಿಯಿಂದಲೇ ನೇಮಕಾತಿಗಳನ್ನು ಮಾಡಬೇಕೆಂದು ಆದೇಶ ನೀಡಿದೆ. ಭಾರತದ ಉಚ್ಚ ನ್ಯಾಯಾಲಯವೂ ಸಹ ದಿನಾಂಕ ೧೩-೪-೮೭ರಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಅಭ್ಯರ್ಥಿಗಳ ಯಾದಿಯನ್ನು ತರಿಸಿಕೊಂಡು ಹುದ್ದೆಗಳನ್ನು ಭರ್ತಿ ಮಾಡುವುದು ಭಾರತ ಸಂವಿಧಾನದ ೧೪ ಮತ್ತು ೧೬ರ ಅನುಚ್ಛೇದದ ವಿಧಿಬಂಗ ಮಾಡಿದಂತಾಗುವುದಿಲ್ಲ. ಬದಲಾಗಿ ಸದರಿ ಅನುಚ್ಛೇದದ ಅಡಿಯಲ್ಲಿ ದತ್ತವಾಗಿರುವ ಪಹಕ್ಕುಗಳನ್ನು ಊರ್ಜಿತಗೊಳಿಸಿದಂತಾಗಿ ಅಭ್ಯರ್ಥಿಗಳ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬರಲು ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ತೀರ್ಪನ್ನು ನೀಡಿರುತ್ತೆ. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನೆರವು ನೀಡುವುದಲ್ಲದೆ ವೃತ್ತಿ ಮಾರ್ಗದರ್ಶನ ಹಾಗೂ ಉದ್ಯೋಗ ಮಾರುಕಟ್ಟೆ ಮಾಹಿತಿ ಸಂಗ್ರಹಣೆ ಹಾಗೂ ವಿಶ್ಲೇಷಣೆ- ಈ ಎರಡು ಪ್ರಮುಖ ಕಾರ್ಯಗಳನ್ನು ಸಹ ಉದ್ಯೋಗ ವಿನಿಮಯ ಕೇಂದ್ರಗಳು ನೆರವೇರಿಸಿಕೊಂಡು ಬರುತ್ತಿದೆ. ಆದಕಾರಣ, ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದು ಗೊಳಿಸುವ ಪ್ರಶ್ನೆ ಉದ್ಭವಾಗುವುದಿಲ್ಲ.

೧) 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ— ಅ

ಕ್ರ. ಸಂ.	ಜಿಲ್ಲೆ	ನೋಂದಾಯಿತ ಅಭ್ಯರ್ಥಿಗಳ ಸಂಖ್ಯೆ		
		ಪುರುಷರು	ಮಹಿಳೆಯರು	ಒಟ್ಟು
೧	೨	೩	೪	೫
೧	ಬೆಂಗಳೂರು	೨,೭೧,೦೮೬	೭೦,೫೦೩	೩,೪೧,೮೮೯
೨	ಬೆಳಗಾವಿ	೫೧,೯೭೨	೭,೦೮೩	೫೯,೦೫೫
೩	ಬಳ್ಳಾರಿ	೨೨,೭೮೦	೩,೬೩೪	೨೬,೪೧೪
೪	ಬೀದರ್	೧೭ ೫೮೫	೧,೮೩೩	೧೯,೪೧೮
೫	ಬಿಜಾಪುರ	೩೨,೭೩೦	೪,೨೪೪	೩೬,೯೭೪
೬	ಚಿಕ್ಕಮಗಳೂರು	೧೯,೪೪೨	೬,೭೩೦	೨೬,೧೭೦
೭	ಚಿತ್ರದುರ್ಗ	೩೨,೮೪೦	೭,೫೫೯	೪೦,೩೮೯
೮	ಗುಲ್ಬರ್ಗಾ	೨೭,೭೯೯	೬,೬೪೪	೩೧,೪೪೩
೯	ಹಾಸನ	೨೫ ೪೭೬	೪ ೪೨೧	೩೧,೮೯೭
೧೦	ಧಾರವಾಡ	೫೪ ೯೭೧	೯ ೧೭೧	೬೪,೦೭೨
೧೧	ಉತ್ತರ ಕನ್ನಡ	೨೨,೧೯೮	೭,೫೬೩	೨೯,೭೬೧
೧೨	ದಕ್ಷಿಣ ಕನ್ನಡ	೩೨,೪೭೮	೧೫,೪೬೬	೪೭ ೯೪೪
೧೩	ಕೋಲಾರ	೩೫,೩೨೪	೬,೧೯೧	೪೧,೫೧೫
೧೪	ಮಂಡಿಕೇರಿ	೮,೯೪೦	೪,೭೬೫	೧೩,೬೦೫
೧೫	ಮಂಡ್ಯ	೨೧ ೫೫೦	೪,೬೫೭	೨೬,೨೦೭
೧೬	ಮೈಸೂರು	೪೬,೧೮೦	೧೨,೩೪೪	೫೮,೫೨೫
೧೭	ರಾಯಚೂರು	೨೧,೭೬೪	೨,೬೦೧	೨೪,೬೬೫
೧೮	ಶಿವಮೊಗ್ಗ	೩೮,೨೬೭	೯,೪೯೫	೪೭ ೭೪೨
೧೯	ತುಮಕೂರು	೪೧,೪೭೩	೯,೮೭೪	೫೧,೩೪೭
	ಒಟ್ಟು—	೯,೨೪,೭೩೩	೧೯೨,೬೭೯	೧೦,೧೭,೪೪೨

ಅನುಬಂಧ--ಆ

ಸಾಲು ಸಂಖ್ಯೆ		ಉದ್ಯೋಗ ಪಡೆದ ಅಭ್ಯರ್ಥಿಗಳ ಸಂಖ್ಯೆ		
		ಪುರುಷರು	ಮಹಿಳೆಯರು	ಒಟ್ಟು
೧		೨	೩	೪
೧	೧೯೮೫	೧೨,೪೯೪	೨,೬೦೩	೧೫,೧೯೭
೨	೧೯೮೬	೮,೯೫೨	೧,೦೬೭	೧೦,೦೧೯
೩	೧೯೮೭ (ನವೆಂಬರ್ ಅಂತ್ಯದವರೆಗೆ)	೬,೯೮೨	೯೧೬	೭,೯೯೮
೪	ಒಟ್ಟು	೨೮,೩೨೮	೪,೫೮೬	೩೩,೧೧೪

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಉತ್ತರವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಈಗ ಡಿ. ಎಲ್. ಆರ್. ಸಿ. ಯ ಒಂದು ಆಕ್ಟ್ ಇದೆ. ಈ ಲೋಕಲ್ ಕಮಿಟಿಯನ್ನು ಮಾಡುವ ಉದ್ದೇಶವಾದರೂ ಏನು ? ವಿಲೇಜ್ ಅಕೌಂಟೆಂಟ್ಸ್ ಪೋಸ್ಟ್‌ಗೆ ಇಂಟರ್‌ವ್ಯೂ ಕರೆದು, ಸೆಲೆಕ್ಟ್ ಮಾಡಿ ಒಂದು ವರ್ಷದಿಂದ ಅವರಿಗೆ ಕೆಲಸ ಕೊಟ್ಟಿಲ್ಲ. ಸೆಕೆಂಡ್ ಡಿವಿಜನ್ ಕ್ಲರ್ಕ್ ಪೋಸ್ಟ್‌ಗಳನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜ್‌ನವರು ಕರೆಯುವುದಿಲ್ಲ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನವರು ಏತಕ್ಕೆ ಈ ಹುದ್ದೆಗೆ ಅರ್ಜಿಗಳನ್ನು ಕರೆಯಬಾರದು. ಇವರು ಈ ಕಮಿಟಿಗಳನ್ನು ಮಾಡಿ ಇವರ ಕಡೆಯ ಜನಗಳಿಗೆ ಕೆಲಸ ಕೊಡುತ್ತಾರೆಯೇ ಹೊರತು ಅವುಗಳು ಏನೂ ಕೆಲಸ ಮಾಡುತ್ತಿಲ್ಲ.ಇಲ್ಲ ಇದು ಹೋಗಬೇಕು, ಇಲ್ಲ ಅದು ಹೋಗಬೇಕು, ಎರಡೂ ಇಲ್ಲ. ದಿನಗೂಲಿ ಕೆಲಸಗಾರರನ್ನು ಹಾಗೂ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ಎನ್‌ರೋಲ್‌ಮೆಂಟ್ ಮಾಡಿಕೊಳ್ಳುವುದಿಲ್ಲ,ಹಾಗಾದರೆ ಇವರ ಗತಿ ಏನು ?ಮನೆಗೊಂದು ಉದ್ಯೋಗ ಕೊಡುವುದು ದಿನಗೂಲಿ ಕೆಲಸದವರಿಗೆ ಖಾಯಂ ಕೆಲಸ ಕೊಡುವುದು ಯಾವ ತರಹ ಸಾಧ್ಯವಾಗುತ್ತದೆ. ಯಾವ ತರಹದಲ್ಲಿ ಇದನ್ನು ಸಾಲ್ವ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನ ಸಿಬ್ಬಂದಿ ದೊಡ್ಡದಂ ಇದರ ಜೊತೆಗೆ ನೀವು ಈ ಕಮಿಟಿಗಳನ್ನು ಮಾಡಿದ್ದೀರಿ. ನಿಮಗೆ ಬೇಕು ಬೇಕಾದವರಿಗೆ ಅಲ್ಲಿ ಹಾಕಿ, ಅವರಿಗೆ ಉದ್ಯೋಗ ಕೊಡುವುದಕ್ಕೆ ಈ ಕಮಿಟಿಗಳನ್ನು ಮಾಡಿದ್ದೀರಾ ? ಇನ್ನು ಪಿ. ಎಸ್. ಸಿ. ಯವರು ಏನು ಮಾಡುತ್ತಿದ್ದಾರೆ ಎಂದು ನೋಡಿದರೆ ಅವರು ಏನೂ ಮಾಡುತ್ತಿಲ್ಲ. ಅವರೂ ಮಾಡುವುದಿಲ್ಲ, ಇವರೂ ಮಾಡುವುದಿಲ್ಲ. ಒಂದು ವರ್ಷ ಆಯಿತು. ವಿಲೇಜ್ ಅಕೌಂಟೆಂಟ್ ಪೋಸ್ಟ್‌ಗೆ ಅರ್ಜಿ ಕರೆದು, ಸೆಲೆಕ್ಟ್ ಮಾಡಿ ಒಂದು ವರ್ಷ ಆಯಿತು. ಇವರು ಏನು ಮಾಡುತ್ತಿದ್ದಾರೆ ?

ಶ್ರೀ ಜೆ. ಎಸ್. ಬಾಗಲ್‌ಕೋಟ್ (ಕಾರ್ಮಿಕ ಮಂತ್ರಿಗಳವರ ಪರವಾಗಿ) —ವಿಲೇಜ್ ಅಕೌಂಟೆಂಟ್ಸ್‌ರನ್ನು ನೇಮಕ ಮಾಡುವ ಬಗ್ಗೆ ಮಾನ್ಯ ಸದಸ್ಯರಿಯವರ ಹೇಳಿದ್ದಾರೆ. ಆ ವಿಚಾರವನ್ನು ಇಲಾಖೆಗೆ ಸಂಬಂಧಪಟ್ಟ ಹಾಗೆ ಪರಿಶೀಲನೆ ಮಾಡುತ್ತೇವೆ. ಹಾಗೆಯೇ ಉದ್ಯೋಗ ವಿನಿಮಯ ಕೇಂದ್ರಗಳಿಂದ ಕ್ಲರ್ಕ್ಸ್ ಮತ್ತು ಇತರರನ್ನು ಏಕೆ ನೇಮಕ ಮಾಡಬಾರದು ಎಂದು ಕೇಳಿದ್ದಾರೆ. ಈಗಿರುವ ನೇಮಕಾತಿ ನಿಯಮಗಳ ಪ್ರಕಾರ ಎ, ಬಿ, ಸಿ, ಗ್ರೂಪ್‌ಗೆ ಸೇರಿದ ನೇಮಕಾತಿಗಳನ್ನು ಲೋಕಸೇವಾ ಆಯೋಗದವರು ಮಾತ್ರ ನೇಮಕ ಮಾಡಬಹುದಾಗಿದೆ. ಆದುದರಿಂದ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲಿಕ್ಕೆ ಬರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕಿಯವರು ಹೇಳಿದ ಹಾಗೆ ಕೆಲವು ಕಡೆಗಳಲ್ಲಿ ವಿಲೇಜ್ ಅಕೌಂಟೆಂಟ್ಸ್‌ಗಳ ನೇಮಕಾತಿ ಬಗ್ಗೆ ಲಿಸ್ಟ್ ಫೈನಲ್ ಆದುದು ನಿಜ. ಆದರೆ ಹೊಸ ಬ್ಯಾಕ್‌ವರ್ಡ್ ಕ್ಲಾಸ್ ಕಮಿಶನ್ ವರದಿ ಬಂದಮೇಲೆ, ಯಾವುದು ಸಂವರ್ಶನ ಕಾರ್ಯ ಮುಗಿದಿದೆ, ಅಂತಹವರಿಗೆ ನೇಮಕಾತಿ ಮಾಡಬೇಕೆಂದು ನಿರ್ಣಯ ತೆಗೆದುಕೊಡಿದ್ದೇನೆ, ಆದರೆ ಅದು ಹೈಕೋರ್ಟ್‌ನಲ್ಲಿ ಕ್ವಾಶ್ ಆಯಿತು. ಈಗ ಹೊಸ ಜಿ. ಓ. ಪ್ರಕಾರ ಮಾಡಬೇಕೆಂದು ಹೇಳಿದ್ದಾರೆ. ಆದಕಾರಣ ವಿಳಂಬವಾಗಿದೆ ಎಂದು ತಿಳಿಸ ಬಯಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರಕಾರ ರೂಲ್ಸ್ ಮಾಡುವುದು ಜನಗಳಿಗೆ ಸುಲಭವಾಗಿ ಸೂಕ್ತವಾದ ರೀತಿಯಲ್ಲಿ ನೇಮಕಾತಿಗಳಲ್ಲಿ ಒಂದು ಸೌಲಭ್ಯ ದೊರೆಯಲಿ ಎಂಬ ಉದ್ದೇಶಕ್ಕಾಗಿ. ಹೈಕೋರ್ಟಿನಲ್ಲಿ ವಿಷಯ ತೀರ್ಮಾನವಾಗ ಬೇಕಾಗಿದೆ. ಆಥವಾ ಅವರು ಹೇಳಿದ ಪ್ರಕಾರ ಮಾಡ ಬೇಕಾಗಿದೆ. ಈಗ ಒಂದು ವರ್ಷದಿಂದಲೂ ಆ ನೇಮಕಾತಿ ಹಾಗೆಯೇ ಉಳಿದುಕೊಂಡು ಬಂದಿದೆ. ಈ ಬಗ್ಗೆ ಒಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಸುಮ್ಮನೆ ನೇಮಕಾತಿ ಸಮಿತಿಗಳನ್ನು ಮಾಡಿ ಕೊಂಡು ಅವರಿಗೆ ಅನುಕೂಲ ಮಾಡಿಕೊಡುತ್ತೀರೇ ಹೊರತು ನಿರುದ್ಯೋಗಿಗಳಿಗೆ ಅದರಿಂದ ಅಷ್ಟಾಗಿ ಪ್ರಯೋಜನ ಸಿಗುವಂತೆ ಕಂಡು ಬರುತ್ತಿಲ್ಲ. ಈಗ ದಿನಗೂಲಿ ಕೆಲಸಗಾರರು ಇದ್ದಾರೆ, ಅವರಿಗೂ ಕೆಲಸ ಕೊಡಬೇಕಾಗುತ್ತದೆ. ಹಾಗೆ ಅವರಿಗೆ ಕೆಲಸ ಕೊಡದಿದ್ದರೆ ಅವರ ಸಮಸ್ಯೆಯನ್ನು ಹೇಗೆ ಬಿಡಿಸು ತ್ತೀರಿ ? ಕೆಲವು ದಿನಗೂಲಿ ನೌಕರರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ.....

ಶ್ರೀ ಎಸ್. ಆರ್. ಬೊಮ್ಮಾಯಿ.—ದಿನಗೂಲಿ ಕೆಲಸಗಾರರು ಎಂದರೆ, ಕೆಲವುಕಡೆಗಳಲ್ಲಿ ಅವಶ್ಯ ಕತೆ ಇದ್ದಲ್ಲಿ, ಒಂದು ನಿಗದಿತ ಆಧಾರಗಳ ಮೇಲೆ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಈ ಬಗ್ಗೆ ಸುಪ್ರೀಮ್ ಕೋರ್ಟಿನ ನಿರ್ಣಯ ಬಂದಮೇಲೆ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ, ಇದರಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು ೭೦-೮೦ ಕೋಟಿ ರೂಪಾಯಿಗಳ ಭಾರ ಬೀಳುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯಿಣಿಯವರು ಹೇಳಿದ ಪ್ರಕಾರ ಈಗಾಗಲೇ ದಿನಗೂಲಿ ನೌಕರರೆಂದು ಕೆಲಸ ಮಾಡುತ್ತಿದ್ದವರನ್ನು ತೆಗೆದಿದ್ದೀರಿ. ಅವರು ೧೭-೨೦ ವರ್ಷಗಳ ಕಾಲ ಕೆಲಸ ಮಾಡಿಕೊಂಡು ಬಂದಿರುತ್ತಾರೆ ಅಂತಹವರನ್ನು ತೆಗೆದಿದ್ದೀರಿ, ಅವರಿಗೆ ಏನು ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗೆ ದೀರ್ಘಕಾಲ ಕೆಲಸ ಮಾಡಿದವರನ್ನು ಯಾರನ್ನೂ ಕೆಲಸದಿಂದ ತೆಗೆದುಹಾಕಿಲ್ಲ. ಯಾರು ಒಂದು ವರ್ಷದ ಒಳಗಾಗಿ ಕೆಲಸ ಮಾಡಿದವರು ಇದ್ದಾರೋ ಅವರನ್ನು ಮಾತ್ರ ತೆಗೆದಿದ್ದೇವೆ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ಹೀಗೆ ದಿನಗೂಲಿ ಕೆಲಸದಲ್ಲಿದ್ದವರಿಗೆ ಉದ್ಯೋಗ ವಿನಿ ಮಯ ಕೇಂದ್ರದವರಂ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುತ್ತಾ ಇಲ್ಲ. ಇದು ಎಂತಹ ನ್ಯಾಯ ? ಅವರು ನಮ್ಮ ದೇಶದವರು ಅಲ್ಲವೇ ? ಅವರಿಗೂ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವ ಒಂದು ಸೌಲಭ್ಯ ಬೇಡವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಪ್ರಕಾರ ಏನು ನಿಯಮಗಳು ಇವೆ ಅದನ್ನು ಈ ದಿಶೆಯಲ್ಲಿ ಮಾಡುತ್ತೇವೆ.

ಶ್ರೀ ಜಿ. ಎಸ್. ಜ್ಞಾನದೇವ ಎಸ್. ದೊಡ್ಡಮೇಟಿ.—ಅಧ್ಯಕ್ಷರೇ ಈ ಕರಿತು ನನ್ನದೊಂದು ಉಪಪ್ರಶ್ನೆ...

ಅಧ್ಯಕ್ಷರು.—ತಾವು ಸಪ್ಲಿಮೆಂಟರಿ ಕೇಳುತ್ತೀರಾ ?

ಶ್ರೀ ಜಿ. ಎಸ್. ಜ್ಞಾನದೇವ ಎಸ್. ದೊಡ್ಡಮೇಟಿ.—ಹೌದು ಅಧ್ಯಕ್ಷರೇ ಅವಕಾಶ ಕೊಡಿ. ನನ್ನ ಪ್ರಶ್ನೆ ಇಷ್ಟೇ, ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೊಂದಾವಣೆ ಮಾಡಿರುವ ಮತ್ತು ವಿನಿ ಮಯ ಕೇಂದ್ರಗಳ ಮೂಲಕ ಉದ್ಯೋಗ ಪಡೆದವರ ಸಂಖ್ಯೆ ಎಷ್ಟಿದೆ ?

ಶ್ರೀ ಜಿ. ಎಸ್. ಬಾಗಲ್‌ಕೋಟ್.—ನನ್ನ ಹತ್ತಿರ ಮಾಹಿತಿ ಸಧ್ಯಕ್ಕೆ ಲಭ್ಯವಿಲ್ಲ. ಮಾನ್ಯ ಸದಸ್ಯರಿಗೆ ಅವಶ್ಯಕವಿದ್ದಲ್ಲಿ, ತರಿಸಿಕೊಡುತ್ತೇನೆ.